# ನಗರಸಭೆ ಚಿಕ್ಕಮಗಳೂರು

ದಿನಾಂಕ :
ಪತ್ರ ಸಂಖ್ಯೆ :

ಇವರಿಗೆ,
ಶ್ರೀ/ಶ್ರೀಮತಿ_______________
______________________
______________________

ಮಾನ್ಯರೇ,

ವಿಷಯ:- ಆಸ್ತಿ ವಿವರಗಳನ್ನು ಖಚಿತಪಡಿಸಿಕೊಳ್ಳುವ ಬಗ್ಗೆ

ನಾಗರೀಕರೊಂದಿಗೆ ಉತ್ತಮ ಭಾಂಧವ್ಯ ಮತ್ತು ಪಾರದರ್ಶಕ ಆಡಳಿತ ನಡೆಸುವ ದೃಷ್ಟಿಯಿಂದ ಚಿಕ್ಕಮಗಳೂರು ನಗರಸಭೆಯು ಆಸ್ತಿ ತೆರಿಗೆ ಲೆಕ್ಕ ಹಾಗೂ ವಸೂಲಿಗಳನ್ನು ಗಣಕೀಕೃತಗೊಳಿಸುತ್ತಿದೆ ಎಂಬ ಅಂಶವನ್ನು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಗಣಕೀಕೃತಗೊಳಿಸುವ ನಿಟ್ಟಿನಲ್ಲಿ ಮೊದಲ ಹಂತವಾಗಿ ನಿಮ್ಮ ಆಸ್ತಿ ವಿವರಗಳನ್ನು ಫೀಲ್ಡ್ ಸರ್ವೇ ಮಾಡಿ Form " C " ನಲ್ಲಿ ನಮೂದಿಸಿರುವುದನ್ನು ಈ ಪತ್ರದ ಜೊತೆ ಲಗತ್ತಿಸಲಾಗಿದೆ. Form " C " ನಲ್ಲಿ ನಮೂದಿಸಲಾಗಿರುವ ನಿಮ್ಮ ಆಸ್ತಿಯ ವಿವರಗಳನ್ನು ಪರಿಶೀಲಿಸಿ, ದಾಖಲು ಮಾಡಿರುವ ಎಲ್ಲ ಮಾಹಿತಿಗಳು ಸರಿಯಿರುವ ಬಗ್ಗೆ ಖಚಿತಪಡಿಸಿಕೊಂಡು Form " C " ಯ ಕೆಳ ಭಾಗದಲ್ಲಿ ಎಲ್ಲ ಮಾಹಿತಿಗಳು ಸರಿ ಇರುವ ಬಗ್ಗೆ ಸಹಿ ಮಾಡಿ ಮೂಲ ಪ್ರತಿಯನ್ನು ಸ್ಥಳೀಯ ಸಂಸ್ಥೆಗೆ ಹಿಂದಿರುಗಿಸುವಂತೆ ತಿಳಿಸಿದೆ.

ಈ ನೋಟೀಸಿನ ಹಿಂದೆ ತಿಳಿಸಿರುವ 11 ವರ್ಗಿಕರಣ ಕೋಷ್ಠಕದಲ್ಲಿ ಸೂಚಿಸಿರುವಂತೆ, ಕಟ್ಟಡ ನಿರ್ಮಾಣದ ರೀತಿ ಹಾಗೂ ಮೌಲೀಕರಣ ವರ್ಗದನ್ವಯ, ನಿಮ್ಮ ಆಸ್ತಿಯನ್ನು ವರ್ಗೀಕರಿಸಲಾಗಿದೆ. (ನಿಮಗೆ ಕೊಟ್ಟಿರುವ ಪ್ರತಿಯಲ್ಲಿ ಕಲಂ 6 ನ್ನು ನೋಡಿಕೊಳ್ಳುವುದು)

ಒಂದು ವೇಳೆ Form " C " ನಲ್ಲಿ ನಮೂದಿಸಿರುವ ಯಾವುದೇ ಮಾಹಿತಿಯನ್ನು ನೀವು ಒಪ್ಪದೇ ಇದ್ದ ಪಕ್ಷದಲ್ಲಿ, ಸರಿಯಾದ ಮಾಹಿತಿಯನ್ನು ನಿಮ್ಮ ಪ್ರಕಾರ ತಪ್ಪು ಮಾಹಿತಿ ಪಕ್ಕದಲ್ಲಿ ಕೈಯಿಂದ ಸರಿ ಮಾಹಿತಿ ನಮುದಿಸಿ, Form 'C' ಯ ಕೆಳಭಾಗದಲ್ಲಿ ನೀವು ಸರಿ ಮಾಡಿರುವ ಕಾಲಂಗಳನ್ನು ಟಿಕ್ ಹಾಕಿ ಸಹಿ ಮಾಡಿ, ತಿದ್ದುಪಡಿ ಮಾಡಿರುವ ಮೂಲ ಪ್ರತಿಯನ್ನು ಚಿಕ್ಕಮಗಳೂರು ನಗರಸಭೆಗೆ ಹಿಂದಿರುಗಿಸತಕ್ಕದ್ದು.

ಸಹಿ ಮಾಡಿದ Form " C " ಗಳನ್ನು ಈ ಪತ್ರ ತಲುಪಿದ 15 ದಿನದೊಳಗಾಗಿ ಚಿಕ್ಕಮಗಳೂರು ನಗರಸಭೆ ಹಿಂತಿರುಗಿಸತಕ್ಕದ್ದು. ಒಂದು ವೇಳೆ 15 ದಿನದೊಳಗಾಗಿ ನಿಮ್ಮಿಂದ ಯಾವುದೇ ಉತ್ತರ ಸ್ವೀಕೃತವಾಗದೇ ಇದ್ದ ಪಕ್ಷದಲ್ಲಿ Form 'C' ಯಲ್ಲಿ ನಮೂದಿಸಿರುವ ಎಲ್ಲ ಮಾಹಿತಿಗಳು ಸರಿಯಾಗಿದೆ ಅದಕ್ಕೆ ನಿಮ್ಮ ಆಕ್ಷೇಪಣೆ ಏನು ಇರುವುದಿಲ್ಲ ಎಂದು ಭಾವಿಸಲಾಗುವುದು.

Form " C " ನಲ್ಲಿ ನೀಡಿರುವ ನಿಮ್ಮ ಆಸ್ತಿ ಗುರುತಿನ ಸಂಖ್ಯೆಯನ್ನು ಇನ್ನು ಮುಂದೆ ನಿಮ್ಮ ಆಸ್ತಿ ಗುರುತಿಸಲು ಉಪಯೋಗಿಸಲಾಗುವುದು. ಆದಕಾರಣ ಈಗ ನೀಡಿರುವ ಆಸ್ತಿ ಸಂಖ್ಯೆಯನ್ನು ನಿಮ್ಮ ಆಸ್ತಿಗೆ ಸಂಬಂಧಿಸಿದ ಮುಂದಿನ ಎಲ್ಲ ವ್ಯವಹಾರಗಳಲ್ಲೂ ಉಲ್ಲೇಖಿಸುವಂತೆ ತಿಳಿಸಿದೆ.

ಆಸ್ತಿ ತೆರಿಗೆಯ ನಿಖರವಾದ ಲೆಕ್ಕವನ್ನು ನಿರ್ವಹಣೆ ಮಾಡುವ ಸಂಬಂಧದಲ್ಲಿ ಚಿಕ್ಕಮಗಳೂರು ನಗರಸಭೆಯು ನಿಮ್ಮ ಪೂರ್ಣ ಸಹಕಾರವನ್ನು ಕೋರಲಾಗಿದೆ.

ವಂದನೆಗಳೊಂದಿಗೆ

ಸಹಿ/-
ಪೌರಾಯುಕ್ತರು
**ನಗರಸಭೆ ಚಿಕ್ಕಮಗಳೂರು**

ಗಮನಿಸಿ

ಫಾರಂ 'ಸಿ' ನಲ್ಲಿನ ಕಲಂ 6 ರಲ್ಲಿ ವರ್ಗೀಕರಿಸಿರುವ ಮೌಲೀಕರಣ ವರ್ಗವು ಕೆಳಕಂಡ ಕೋಷ್ಠಕದಂತಿರುತ್ತದೆ.

| ಮೌಲೀಕರಣ ವರ್ಗ | ಕಟ್ಟಡ ನಿರ್ಮಾಣದ ಸ್ವರೂಪ | ನೆಲ ಮಹಡಿ ರೂ. ಪ್ರತಿ ಚ.ಅಡಿಗೆ | ಒಂದನೇ ಅಂತಸ್ತು ರೂ. ಪ್ರತಿ ಚ.ಅಡಿಗೆ |
|---|---|---|---|
| **1.** | ಆರ್.ಸಿ.ಸಿ. ಕಾಲಂ ಸಹಿತ ತೇಗದ ಮರದಿಂದ ಒಳಗೊಂಡ ಸೂಪರ್ ಸ್ಟ್ರಕ್ಚರ್. | **560** | **500** |
| **2.** | ಆರ್.ಸಿ.ಸಿ. ಕಾಲಂ ರಹಿತ ತೇಗದ ಮರದಿಂದ ಒಳಗೊಂಡ ಸೂಪರ್ ಸ್ಟ್ರಕ್ಚರ್. | **530** | **450** |
| **3.** | ಆರ್.ಸಿ.ಸಿ. ನಂದಿ/ಮತ್ತಿ/ಅಡಿ ಮರದಿಂದ ಒಳಗೊಂಡ ಮೊಜಾಯಿಕ್ ಹಾಸು ನೆಲಹಾಸುವಿರುವ ಕಟ್ಟಡ. | **480** | **430** |
| **4.** | ಆರ್.ಸಿ.ಸಿ ನಂದಿ/ಮತ್ತಿ/ಅಡಿ ಮರದಿಂದ ಒಳಗೊಂಡ ರೆಡ್ ಅಕ್ಸಾಯಿಡ್ ನೆಲಹಾಸು ಇರುವ ಕಟ್ಟಡ. | **390** | **350** |
| **5.** | ಇಟ್ಟಿಗೆ, ಸಿಮೆಂಟ್‌ನಿಂದ ಕಟ್ಟಿದ ಗೋಡೆ ಮತ್ತು ನಂದಿ/ ಮತ್ತಿಮರ ಉಪಯೋಗಿಸಿದ ಮಂಗಳೂರು ಹೆಂಚು ಛಾವಣಿ. | **250** | |
| **6.** | ಮಣ್ಣು ಇಟ್ಟಿಗೆ ಗೋಡೆ, ಸಾಮಾನ್ಯ ಕಾಡು ಜಾತಿ ಮರ ಉಪಯೋಗಿಸಿದ ಮಂಗಳೂರು ಹೆಂಚು ಛಾವಣಿ. | **250** | |
| **7.** | ಸಿಂದು ಗೋಡೆಗಳಿಂದ ( ದಡುಕಿನ ಬೊಂಬು, ಗಳಗಳಿಗೆ ಮಣ್ಣು ಮತ್ತಿದ ಗೋಡೆ ) ಮತ್ತು ಬೊಂಬು ಮತ್ತು ಅಡಿಕೆ ಮರದ ರೀಪುಗಳ ಕೆಂಪು ಹೆಂಚಿನ ಛಾವಣಿ. | **180** | |
| **8.** | ಮಣ್ಣು ಇಟ್ಟಿಗೆ ಗೋಡೆ ಸಾಮಾನ್ಯ ಕಾಡು ಜಾತಿ ಮರ ಉಪಯೋಗಿಸಿದ ನಾಡು ಹೆಂಚು ಛಾವಣಿ. | **125** | |
| **9.** | ಸಿಂದು ಗೋಡೆಗಳಿಂದ (ಬಿರುಕಿನ ಬೊಂಬು, ಗಳಗಳಿಗೆ ಮಣ್ಣು ಮತ್ತಿದ ಗೋಡೆ ) ಮತ್ತು ಬೊಂಬು ಮತ್ತು ಅಡಿಕೆ ಮರದ ರೀಪುಗಳ ನಾಡ ಹೆಂಚಿನ ಛಾವಣಿ. | **100** | |
| **10.** | ಮಣ್ಣು ಗೋಡೆ ಮೇಲ್ಮುಡಿ ಛಾವಣಿ ಹಾಕಿದಂತಹ ಸಾದ ಮನೆ. | **100** | |
| **11.** | ಕಲ್ಲು ಕಂಬ ಬೊಂಬುಗಳ ನಿಲ್ಲಿಸಿ ಅಡಿಕೆ ರೀಪು, ಬೊಂಬು ರೀಪು ಹಾಕಿದ ಛಾವಣಿಗೆ ಸೋಗೆ ಹೊದಿಸಿದ ಮನೆ | **80** | |